# ಬೃಹತ್ ಬೆ□ಗಳೂರು ಮಹಾನಗರ ಪಾಲಿಕೆ

**<u>ದಿನಾಂಕ: 12-11-2013ರಂದು ಮಾರುಕಟ್ಟೆ ಸ್ಥಾಯಿ ಸಮಿತಿಯಲ್ಲಿ ನಡೆದ ಸಭೆಯ ನಡವಳಿಗಳು</u>**

| ಹಾಜರಿದ್ದ ಸದಸ್ಯರುಗಳು ಶ್ರೀಯುತರುಗಳಾದ : | | ಹಾಜರಿದ್ದ ಅಧಿಕಾರಿಗಳು : |
|---|---|---|
| ವೈ.ಆರ್. ಗೌರಮ್ಮ | ಅಧ್ಯಕ್ಷರು | ಜಂಟಿ ಆಯುಕ್ತರು(ರಾಜರಾಜೇಶ್ವರಿ ನಗರ) |
| ಬಿ.ಆರ್. ನಂಜುಂಡಪ್ಪ | ಸದಸ್ಯರು | ಜಂಟಿ ಆಯುಕ್ತರು(ಬೊಮ್ಮನಹಳ್ಳಿ) |
| ಸಿದ್ದಲಿಂಗಯ್ಯ(ಸಿದ್ದು) | ಸದಸ್ಯರು | ಉಪ ಆಯುಕ್ತರು(ಮಾರುಕಟ್ಟೆ) |
| ವಿಜಯ.ಎ | ಸದಸ್ಯರು | ಉಪ ಆಯುಕ್ತರು(ಯಲಹಂಕ) |
| ಗೀತಾಶ್ರೀನಿವಾಸರೆಡ್ಡಿ | ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| ಎಲ್. ಶ್ರೀನಿವಾಸ್ | ಸದಸ್ಯರು | ಕಂದಾಯ ಅಧಿಕಾರಿ(ಮಾರುಕಟ್ಟೆ) |
| ಲತಾ.ಕೆ | ಸದಸ್ಯರು | ಸಹಾಯಕ ಕಾನೂನು ಅಧಿಕಾರಿ |
| ಎನ್. ಪಿಳ್ಳಪ್ಪ | ಸದಸ್ಯರು | ಸಹ ಕಂದಾಯ ಅಧಿಕಾರಿ(ಪೂರ್ವ-ಮಾರುಕಟ್ಟೆ) |
| ಮುನಿಸಂಜೀವಯ್ಯ | ಸದಸ್ಯರು | ಸಹ ಕಂದಾಯ ಅಧಿಕಾರಿ (ಪಶ್ಚಿಮ-ಮಾರುಕಟ್ಟೆ) |
| ಕ್ವೀನ್ ಎಲಿಜಬೆತ್ | ಸದಸ್ಯರು | ಸಹ ಕಂದಾಯ ಅಧಿಕಾರಿ(ದಕ್ಷಿಣ-ಮಾರುಕಟ್ಟೆ) |
| | | ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು(ಮಾರುಕಟ್ಟೆ) |
| | | ಸಹ ಕಂದಾಯ ಅಧಿಕಾರಿ (ಯಲಹಂಕ) |
| | | ಸಹ ಕಂದಾಯ ಆಧಿಕಾರಿ (ಕೆ.ಆರ್. ಪುರ) |
| | | ಸಹ ಕಂದಾಯ ಅಧಿಕಾರಿ (ವೈಟ್‌ಫೀಲ್ಡ್) |
| | | ಸಹ ಕಂದಾಯ ಅಧಿಕಾರಿ (ಹೊರಮಾವು) |

*****

ಆಧ್ಯಕ್ಷರು, ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಮಾರುಕಟ್ಟೆ ಇಲಾಖೆಗೆ ಸಂಬಂಧಿಸಿದಂತೆ ಪಾಲಿಕೆ ಅಧಿಕಾರಿಗಳು ಕಳೆದ ಸಭೆಯಲ್ಲಿ ಚರ್ಚಿಸಲಾದ ವಿಷಯಗಳ ಬಗ್ಗೆ ಅಂದರೆ ಪಾಲಿಕೆಯ ಎಲ್ಲಾ ಮಾರುಕಟ್ಟೆಗಳಿಂದ ಪಾಲಿಕೆಗೆ ವಾರ್ಷಿಕ ಎಷ್ಟು ಪರವಾನಗಿ ಶುಲ್ಕ ಬರುತ್ತಿದೆ , ಬಾಕಿ ಎಷ್ಟಿದೆ, (ಬೇಡಿಕೆ, ವಸೂಲಾತಿ, ಬಾಕಿ) ಮಾರುಕಟ್ಟೆಗಳಲ್ಲಿ ಇರುವ ಮಳಿಗೆಗಳಿಗೆ ಪರವಾನಗಿ ಶುಲ್ಕ ಪರಷ್ಕರಿಸಿ ಎಷ್ಟು ವರ್ಷ ಆಗಿದೆ. ಪರಿಷ್ಕರಿಸಿರುವ ಪರವಾನಗಿ ಶುಲ್ಕವನ್ನು ಮಳಿಗೆದಾರರು ಸರಿಯಾಗಿ ಪಾವತಿ ಮಾಡುತ್ತಿದ್ದಾರೆಯೇ, ಪರವಾನಗಿ ಶುಲ್ಕ ಪಾವತಿ ಮಾಡದೇ ಇರುವವರಿಗೆ ನೋಟಿಸ್ ನೀಡಲಾಗಿದೆಯೇ, ಎಷ್ಟು ಮಳಿಗೆಗಳಿಗೆ ನೀಡಲಾಗಿದೆ, ನೋಟಿಸ್ ನೀಡಿದ್ದರೂ ಸಹ ಪಾವತಿಸದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ, ಪಾಲಿಕೆಯ ಮಾರುಕಟ್ಟೆಗಳಲ್ಲಿ ವಲಯವಾರು ಎಷ್ಟು ಮಳಿಗೆಗಳು ಖಾಲಿ ಇವೆ, ಎಷ್ಟು ವರ್ಷಗಳಿಂದ ಖಾಲಿ ಇವೆ, ಖಾಲಿ ಇರುವ ಮಳಿಗೆಗಳನ್ನು ಹಂಚಿಕೆ ಮಾಡಲು ಟೆಂಡರ್ ಕರೆಯಲಾಗಿದೆಯೇ ಅಥವಾ ಇಲ್ಲವೇ ಎಂಬ ಇವೇ ಮೊದಲಾದ ವಿಷಯಗಳ ಬಗ್ಗೆ ಮುಂದಿನ ಸಭೆಗೆ ಒದಗಿಸಲು ಕೋರಲಾಗಿತ್ತು. ಸದರಿ ವಿಷಯಗಳಿಗೆ ಸಂಬಂಧಪಟ್ಟಂತೆ ವಲಯವಾರು ವಿಚಾರಿಸಲಾಯಿತು.

ಬೊಮ್ಮನಹಳ್ಳಿ ವಲಯದಲ್ಲಿ ಒಟ್ಟು 40 ಅಂಗಡಿಗಳಿದ್ದು, 29 ಅಂಗಡಿಗಳನ್ನು ಬಾಡಿಗೆಗೆ ಕೊಟ್ಟಿರುವುದಾಗಿಯೂ, 72ಲಕ್ಷ ರೂ.ಗಳು ಬಾಕಿ ಇರುವುದಾಗಿಯೂ ಪಾಲಿಕೆ ಅಧಿಕಾರಿಗಳು ತಿಳಿಸಿದರು. ಇದರ ಬಗ್ಗೆ ನೀಡಿರುವ ಕಡತವನ್ನು ದಿನಾಂಕ: 8-1-2013ರಂದು ಉಪ ಆಯುಕ್ತರು (ಮಾರುಕಟ್ಟೆ)ರವರ ಕಛೇರಿಗೆ ಕಳುಹಿಸಲಾಗಿದೆ ಎಂಬುದಾಗಿ ತಿಳಿಸಿದರು.

ರಾಜರಾಜೇಶ್ವರಿ ನಗರ ವಲಯ ಮಾರುಕಟ್ಟೆಗಳಲ್ಲಿ 11 ಮಳಿಗೆಗಳು ಇದ್ದು, ಹಳೇ ದರದಲ್ಲಿಯೇ ಬಾಡಿಗೆ ಬರುತ್ತಿರುವುದಾಗಿಯೂ, ತಿಳಿಸಿದರು. ಇದುವರೆವಿಗೂ ಏಕೆ ಪರವಾನಗಿ ಶುಲ್ಕ ಪರಿಷ್ಕರಣೆ ಮಾಡಿಲ್ಲವೆಂದು

ಪ್ರಶ್ನಿಸಲಾಯಿತು. ಸಮಂಜಸವಾದ ಉತ್ತರ ದೊರೆಯದ ಕಾರಣ ಪಾಲಿಕೆಯ ಆರ್ಥಿಕ ಹಿತದೃಷ್ಠಿಯಿಂದ ಪರಿಷ್ಕರಣೆಯ ಬಗ್ಗೆ ಅದಷ್ಟು ಜರೂರಾಗಿ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು.

ಯಲಹಂಕ ಮಾರುಕಟ್ಟೆಯಲ್ಲಿ 68 ಅಂಗಡಿಗಳು ಇದ್ದು, ಇವುಗಳನ್ನು ಹರಾಜಿನ ಮೂಲಕ ಹಂಚಿರುವುದಾಗಿಯೂ, ಆದರೆ ಇವುಗಳಿಂದ ಬಾಡಿಗೆ ಬರುತ್ತಿಲ್ಲವೆಂದು ಇದರ ಬಗ್ಗೆ ನೋಟೀಸ್ ಕೊಟ್ಟಿರುವುದಾಗಿ ತಿಳಿಸಿದರು. 35 ಅಂಗಡಿಗಳು ಖಾಲಿ ಇರುವುದಾಗಿಯೂ ತಿಳಿಸಿದರು. ಸದರಿ ವ್ಯಾಪಾರಸ್ಥರು ಪಾವತಿಸಿರುವ ಮುಂಗಡ ಹಾಗೆಯೇ ಇರುವುದಾಗಿ ತಿಳಿಸಿದರು. ಮುಂಗಡವಾಗಿ ತೆಗೆದುಕೊಂಡ ಹಣವನ್ನು ಯಾವುದೇ ಕಾರಣಕ್ಕೂ ವಾಪಸ್ಸು ಕೊಡಬೇಡಿ ಎಂದು ಅಧ್ಯಕ್ಷರು ಸೂಚಿಸಿದರು. ಇಲ್ಲಿರುವ ಅಂಗಡಿಗಳನ್ನು ಕೆಡವಿಹಾಕಲು ಪಾಲಿಕೆಯು ತೀರ್ಮಾನಿಸಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿರುತ್ತಾರೆ.

ಕೆ.ಆರ್. ಪುರಂ ಸಂತೆ ಮೈದಾನದಲ್ಲಿ ಒಟ್ಟು 112 ಅಂಗಡಿಗಳು ಇರುವುದಾಗಿಯೂ, ಆದರೆ ಇವುಗಳಿಗೆ ಬಾಗಿಲುಗಳು ಇಲ್ಲದಿರುವುದರಿಂದ ಯಾರು ಬಾಡಿಗೆ ಕೊಡುತ್ತಿಲ್ಲವೆಂದು, ಆದರೆ ಸದರಿ ಅಂಗಡಿಗಳ ಮುಂದೆ ತೆರದ ಅಂಗಳದಲ್ಲಿ ವ್ಯಾಪಾರ ನಡೆಸುತ್ತಿರುವುದಾಗಿಯೂ ತಿಳಿಸಿರುತ್ತಾರೆ. ಸದರಿ ಅಂಗಡಿಗಳನ್ನು ಕೆಡವಿ ಹಾಕಿ ಹೊಸ ಅಂಗಡಿಗಳನ್ನು ಮಾಡುವವರೆಗೂ ಬಾಡಿಗೆ ಕೊಡುವುದಿಲ್ಲವೆಂದು ವ್ಯಾಪಾರಿಗಳು ತಿಳಿಸಿರುವುದಾಗಿ ಅಧಿಕಾರಿಗಳು ಸಮಿತಿಯ ಗಮನಕ್ಕೆ ತಂದಿರುತ್ತಾರೆ. ಇದರಿಂದ ಅಸಮಾಧಾನಗೊಂಡ ಅಧ್ಯಕ್ಷರು ಅಂಗಡಿಗಳ ಮುಂದೆ ವ್ಯಾಪಾರ ನಡೆಸಲು ಅನುವು ಮಾಡಿಕೊಟ್ಟವರು ಯಾರು. ಇದರಿಂದ ಪಾಲಿಕೆಗೆ ಅದಾಯಕ್ಕೆ ಧಕ್ಕೆ ಉಂಟಾಗುವುದರಿಂದ, ಅವರುಗಳನ್ನು ಆ ಸ್ಥಳದಲ್ಲಿ ವ್ಯಾಪಾರ ಮಾಡಲು ಬಿಡದೆ ಜರೂರಾಗಿ ನೋಟಿಸ್ ನೀಡಲು ತಿಳಿಸಿದರು. ಇದರ ಬಗ್ಗೆ ನೋಟಿಸ್ ನೀಡಿರುವುದಾಗಿ ಅಧಿಕಾರಿಗಳು ತಿಳಿಸಿದರು. ಹಾಗಿದ್ದಲ್ಲಿ ಕಾನೂನು ರೀತ್ಯಾ ಮುಂದಿನ ಅಗತ್ಯ ಕ್ರಮಕೈಗೊಳ್ಳಲು ಅಧ್ಯಕ್ಷರು ಸೂಚಿಸಿದರು.

ಮಹದೇವಪುರ ಮಾರುಕಟ್ಟೆಯಲ್ಲಿ ಇರುವ ಅಂಗಡಿಗಳಿಗೆ ಸರಿಯಾದ ವಿದ್ಯುತ್ ವ್ಯವಸ್ಥೆ ಇಲ್ಲವೆಂದು, ಬಾಡಿಗೆ ಪರಿಷ್ಕರಣೆ ಮಾಡಿಲ್ಲವೆಂದು ತಿಳಿಸಿದರು. ಈ ಬಗ್ಗೆ ಸಂಬಂಧದಪಟ್ಟವರಿಗೆ ಟಿಪ್ಪಣಿ ಕಳುಹಿಸಿ, ಅಗತ್ಯ ಸೌಕರ್ಯಗಳನ್ನು ಒದಗಿಸಲು ಕೋರುವಂತೆ ಸೂಚಿಸಲಾಯಿತು.

ಪೂರ್ವ ವಲಯ ವ್ಯಾಪ್ತಿಗೆ ಬರುವ ಮಹಾತ್ಮಗಾಂಧಿ ರಸ್ತೆಯಲ್ಲಿರುವ ನೇತಾಜಿ ಸುಭಾಷ್ ಚಂದ್ರಬೋಸ್ ಕಟ್ಟಡದಲ್ಲಿರುವ ಕ್ರೌನ್‌ಕೆನೊಪಿ ಹೋಟೆಲ್‌ನ ಪರವಾನಗಿದಾರರು ಪರಿಷ್ಕೃತ ಪರವಾನಗಿ ಶುಲ್ಕವನ್ನು ಪಾವತಿಸದೇ ಘನ ನ್ಯಾಯಾಲಯದಲ್ಲಿ ದಾವೆ ಹೂಡಿ, ಹಳೆಯ ದರದಲ್ಲಿ ಪರವಾನಗಿ ಶುಲ್ಕವನ್ನು ಪಾವತಿಸುತ್ತಿರುವುದಾಗಿ, ಅಧಿಕಾರಿಗಳು ತಿಳಿಸಿದರು. ಇದರಿಂದ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗುತ್ತಿದ್ದು, ಸದರಿ ವಿಷಯಕ್ಕೆ ಸಂಬಂಧಪಟ್ಟ ಕಡತವನ್ನು ಪರಿಶೀಲನೆಗಾಗಿ ಸಮಿತಿಯ ಮುಂದೆ ಮುಂದಿನ ಸಭೆಯಲ್ಲಿ ಹಾಜರುಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು

ಹಿಂದಿನ ತಪಾಸಣೆಯಲ್ಲಿ ಸೂಚಿಸಲಾಗಿದ್ದ ವಿಷಯಗಳ ಬಗ್ಗೆ ಏನೇನು ಕ್ರಮ ಕೈಗೊಂಡಿರುವಿರಿ ಎಂದು ವಿಚಾರಿಸಲಾಗಿ, ಯಾವುದೇ ಪ್ರಗತಿಯಾಗದೇ ಇರುವುದು ಕಂಡುಬಂತು. ಅಧಿಕಾರಿಗಳ ನಿರ್ಲಕ್ಷ್ಯತನದ ಬಗ್ಗೆ ಆಯುಕ್ತರ ಬಳಿ ಸಮಿತಿಯು ಚರ್ಚಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸುವ ಬಗ್ಗೆ ನಿರ್ಧರಿಸಲಾಯಿತು.

ಇನ್ನು ಮುಂದೆ ಸಭೆಗಳಲ್ಲಿ ಹಾಗೂ ತಪಾಸಣೆಯಲ್ಲಿ ಸಮಿತಿಯು ಸೂಚಿಸುವ ವಿಷಯಗಳಿಗೆ ಜರೂರು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿ, ಮುಂದಿನ ಸಭೆಗೆ ಮಾರುಕಟ್ಟೆಯಲ್ಲಿರುವ ಮಳಿಗೆವಾರು ಸಂಪೂರ್ಣ ವಿವರಗಳನ್ನು ಸಮಿತಿಗೆ ಒದಗಿಸಲು ಸೂಚಿಸಿ, ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಇಲಾಖೆಯ ಎಲ್ಲಾ ಅಧಿಕಾರಿಗಳು ಮತ್ತು ನೌಕರರು ಒಗ್ಗಟ್ಟಿನಿಂದ ಶ್ರಮಿಸಿ, ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಕಾರ್ಯೋನ್ಮುಖರಾಗಲು ಸೂಚಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-

( ವೈ.ಆರ್. ಗೌರಮ್ಮ )
ಅಧ್ಯಕ್ಷರು
ಮಾರುಕಟ್ಟೆ ಸ್ಥಾಯಿ ಸಮಿತಿ

.

. 3

ಪ್ರತಿಯನ್ನು :

1) ಪೂಜ್ಯ ಮಹಾಪೌರರ ಅವಗಾಹನೆಗೆ ಕಳುಹಿಸಿದೆ.
2) ಮಾನ್ಯ ಉಪ ಮಹಾಪೌರರ ಅವಗಾಹನೆಗೆ ಕಳುಹಿಸಿದೆ.
3) ಮಾನ್ಯ ಆಯುಕ್ತರ ಅವಗಾಹನೆಗೆ ಕಳುಹಿಸಿದೆ.
4) ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ ಕಳುಹಿಸಲು ಕೋರಿದೆ.
5) ಅಪರ ಆಯುಕ್ತರು(ಹಣಕಾಸು–ಮಾರುಕಟ್ಟೆ)ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
6) ಅಪರ ಆಯುಕ್ತರು(ಆಡಳಿತ)ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
7) ಅಪರ/ಜಂಟಿ ಆಯುಕ್ತರು (ಯಲಹಂಕ) (ಮಹದೇವಪುರ) (ಬೊಮ್ಮನಹಳ್ಳಿ) (ರಾಜರಾಜೇಶ್ವರಿನಗರ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
8) ಮುಖ್ಯ ಅಭಿಯಂತರರು(ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
9) ಉಪ ಆಯುಕ್ತರು (ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
10) ಕಂದಾಯ ಅಧಿಕಾರಿ (ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
11) ಸಹ ಕಂದಾಯ ಅಧಿಕಾರಿ (ಪೂರ್ವ/ಪಶ್ಚಿಮ/ದಕ್ಷಿಣ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
12) ಮಾರುಕಟ್ಟೆ ಸ್ಥಾಯಿ ಸಮಿತಿಯ ಮಾನ್ಯ ಸದಸ್ಯರು, ಶ್ರೀಯುತರುಗಳಾದ :

| | |
|---|---|
| ಬಿ.ಆರ್. ನಂಜುಂಡಪ್ಪ (ವಾರ್ಡ್ ನಂ.17) | ಲತಾ.ಕೆ (ವಾರ್ಡ್‌ನಂ.174), |
| ಸಿದ್ದಲಿಂಗಯ್ಯ (ಸಿದ್ದು)(ವಾರ್ಡ್‌ನಂ.87) | ಎಸ್. ಕ್ರಿಯಾ ಶೈಲಜ (ವಾರ್ಡ್ ನಂ.48), |
| ಶ್ರೀಮತಿ. ವಿಜಯ.ಎ (ವಾರ್ಡ್‌ನಂ.197) | ಎನ್. ಪಿಳ್ಳಪ್ಪ (ವಾರ್ಡ್ ನಂ.82), |
| ಗೀತಾ ಶ್ರೀನಿವಾಸರೆಡ್ಡಿ (ವಾರ್ಡ್ ನಂ.112) | ಮುನಿಸಂಜೀವಯ್ಯ (ವಾರ್ಡ್‌ನಂ.170) |
| ಎಲ್. ಶ್ರೀನಿವಾಸ್ (ವಾರ್ಡ್‌ನಂ.182), | ಕ್ವೀನ್ ಎಲಿಜಬೆತ್(ವಾರ್ಡ್‌ನಂ.96 ) ರವರಿಗೆ ಕಳುಹಿಸಿದೆ. |

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 18-11-2013ರಂದು ಮಾರುಕಟ್ಟೆ ಸ್ಥಾಯಿ ಸಮಿತಿಯಲ್ಲಿ ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು ಶ್ರೀಯುತರುಗಳಾದ : | | ಹಾಜರಿದ್ದ ಅಧಿಕಾರಿಗಳು : |
|---|---|---|
| ವೈ.ಆರ್. ಗೌರಮ್ಮ | ಅಧ್ಯಕ್ಷರು | ಮುಖ್ಯ ಅಭಿಯಂತರರು(ಮಾರುಕಟ್ಟೆ) |
| ಬಿ.ಆರ್. ನಂಜುಂಡಪ್ಪ | ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| ವಿಜಯ.ಎ | ಸದಸ್ಯರು | ಉಪ ಆಯುಕ್ತರು(ಮಾರುಕಟ್ಟೆ) |
| ಗೀತಾ ಶ್ರೀನಿವಾಸ ರೆಡ್ಡಿ | ಸದಸ್ಯರು | ಉಪ ಆಯುಕ್ತರು(ದಾಸರಹಳ್ಳಿ) |
| ಎಲ್. ಶ್ರೀನಿವಾಸ್ | ಸದಸ್ಯರು | ಉಪ ಆಯುಕ್ತರು(ಮಹದೇವಪುರ) |
| ಲತಾ. ಕೆ | ಸದಸ್ಯರು | ಉಪ ಆಯುಕ್ತರು(ಬೊಮ್ಮನಹಳ್ಳಿ) |
| ಎಸ್. ಕ್ರಿಯಾ ಶೈಲಜ | ಸದಸ್ಯರು | ಕಂದಾಯ ಅಧಿಕಾರಿ(ಮಾರುಕಟ್ಟೆ) |
| ಎನ್. ಪಿಳ್ಳಪ್ಪ | ಸದಸ್ಯರು | ಕಾರ್ಯಪಾಲಕ ಅಭಿಯಂತರರು(ಮಾರುಕಟ್ಟೆ) |
| ಮುನಿಸಂಜೀವಯ್ಯ | ಸದಸ್ಯರು | ಸಹ ಕಂದಾಯ ಅಧಿಕಾರಿ(ಪೂರ್ವ-ಮಾರುಕಟ್ಟೆ) |
| ಕ್ವೀನ್ ಎಲಿಜಬೆತ್ | ಸದಸ್ಯರು | ಸಹ ಕಂದಾಯ ಅಧಿಕಾರಿ(ರಾಜರಾಜೇಶ್ವರಿನಗರ) |
| | | ಸಹ ಕಂದಾಯ ಅಧಿಕಾರಿ(ದಕ್ಷಿಣ-ಮಾರುಕಟ್ಟೆ) |
| | | ಸಹ ಕಂದಾಯ ಅಧಿಕಾರಿ (ಪಶ್ಚಿಮ-ಮಾರುಕಟ್ಟೆ) |
| | | ಸ.ಕಾ.ನಿ.ಅ (ಮಾರುಕಟ್ಟೆ) |

* * * * *

ಆಧ್ಯಕ್ಷರು, ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಮಾರುಕಟ್ಟೆ ಇಲಾಖೆಗೆ ಸಂಬಂಧಿಸಿದಂತೆ ಪಾಲಿಕೆ ಅಧಿಕಾರಿಗಳು ಕಳೆದ ಸಭೆಯಲ್ಲಿ ಚರ್ಚಿಸಲಾದ ವಿಷಯಗಳ ಬಗ್ಗೆ ಅಂದರೆ ಪಾಲಿಕೆಯ ಎಲ್ಲಾ ಮಾರುಕಟ್ಟೆಗಳಿಂದ ಪಾಲಿಕೆಗೆ ಬರಬೇಕಾದ ಬಾಕಿಯ ಬಗ್ಗೆ ಕೇಳಲಾಗಿ ಪೂರ್ವ ವಲಯದ ಮಾರುಕಟ್ಟೆಗಳಿಂದ 19 ಕೋಟಿ, ಪಶ್ಚಿಮ ವಲಯದ ಮಾರುಕಟ್ಟೆಗಳಿಂದ 5 ಕೋಟಿ, ದಕ್ಷಿಣ ಮಾರುಕಟ್ಟೆಗಳಿಂದ ರೂ. 17 ಕೋಟಿ ಬಾಕಿ ವಸೂಲಾತಿ ಮಾಡಬೇಕಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಪಾಲಿಕೆಯ ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯ ವ್ಯಾಪ್ತಿಯ ಮಾರುಕಟ್ಟೆಗಳಿಂದ ಪಾಲಿಕೆಗೆ ಬರಬೇಕಾದ ಪರವಾನಗಿ ಶುಲ್ಕದ ಬಾಕಿ ಮೊತ್ತವು ಹೆಚ್ಚಾಗಿ ಇರುವುದರಿಂದ ಮಾರುಕಟ್ಟೆ ಇಲಾಖೆಯ ಕೆಳಹಂತದ ನೌಕರರು ಹಾಗೂ ಹಿರಿಯ ಅಧಿಕಾರಿಗಳು ಆಸಕ್ತಿ ವಹಿಸದೇ ನಿರ್ಲಕ್ಷ್ಯದಿಂದ ಕಾರ್ಯನಿರ್ವಹಿಸುತ್ತಿರುವುದನ್ನು ಸಮಿತಿಯು ಗಮನಿಸಿ, ಇದು ಅಧಿಕಾರಿಗಳ ಬೇಜವಾಬ್ದಾರಿತನವನ್ನು ತೋರಿಸುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸುತ್ತಾ, ಸಭೆಯ ಚರ್ಚೆಯಲ್ಲಿ ಹಿರಿಯ ಅಧಿಕಾರಿಗಳಾದ ಉಪ ಆಯುಕ್ತರು ಹಾಗೂ ಕಂದಾಯಾಧಿಕಾರಿಗಳು ಕೇವಲ ಕಿರಿಯ ನೌಕರರ ಮೇಲೆ ಸಂಪೂರ್ಣ ಜವಾಬ್ದಾರಿ ಹೊರಿಸಿ ದೂರುವುದು ಸರಿಯಿಲ್ಲವೆಂದು ಇದರ ಬಗ್ಗೆ ತಾವುಗಳು ಸಹ ಜವಾಬ್ದಾರಿಯಿಂದ ಕಾರ್ಯನಿರ್ವಹಣೆ ಮಾಡಬೇಕೆಂದು, ಅಧ್ಯಕ್ಷರು ಹಾಗೂ ಸದಸ್ಯರುಗಳು ಸೂಚಿಸಿದರು.

ವಲಯವಾರು ಮಾರುಕಟ್ಟೆಗಳ ಸಂಪೂರ್ಣ ವಿವರ, ಮಾರುಕಟ್ಟೆಗಳ ಮಳಿಗೆಗಳ ಪರವಾನಗಿ ಶುಲ್ಕ ಪರಿಷ್ಕರಣೆಯ ಕುರಿತು ಕರಡು ವರದಿ, ವಲಯವಾರು ಪರವಾನಗಿ ಶುಲ್ಕ ಬಾಕಿ ಇರುವ ಸಂಪೂರ್ಣ ವಿವರಗಳಿರುವ ಪಟ್ಟಿ, ಮಾರುಕಟ್ಟೆ ಇಲಾಖೆಗೆ ಸಂಬಂಧಪಟ್ಟಂತೆ ನ್ಯಾಯಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಸಂಪೂರ್ಣ ವಿವರಗಳ ಪಟ್ಟಿ, ವಹಿವಾಟು ನಡೆಯದೆ ಖಾಲಿ ಇರುವ ಮಾರುಕಟ್ಟೆಗಳ ಪಟ್ಟಿಗಳನ್ನೊಳಗೊಂಡ ಮಾಹಿತಿಗಳನ್ನು ದಿನಾಂಕ 21-11-2013 ರೊಳಗೆ ತಪ್ಪದೇ ಸಮಿತಿಗೆ ಒದಗಿಸುವಂತೆಯೂ ಸೂಚಿಸಲಾಯಿತು.

. . . . . 2

ಕೆ.ಆರ್. ಮಾರುಕಟ್ಟೆಯಲ್ಲಿರುವ ಮಟನ್ ಮಾರುಕಟ್ಟೆಗಳ ಬಗ್ಗೆ ವಿಚಾರಿಸಲಾಗಿ, 15ವರ್ಷಗಳಿಂದ ಖಾಲಿ ಇರುವುದಾಗಿಯೂ ತಿಳಿಸಿದರು. ಇಲ್ಲಿರುವ ಮೊದಲನೇ ಅಂತಸ್ತು ಮತ್ತು ನೆಲ ಅಂತಸ್ತಿನ ಬಗ್ಗೆ ಮಾಹಿತಿ, ಬೋಟಿ ಮಾರ್ಕೆಟ್ ಸುಮಾರು ವರ್ಷಗಳಿಂದ ಬೀಗ ಹಾಕಿರುವುದಾಗಿಯೂ, ದೀಪಾಂಜಲಿ ನಗರದಲ್ಲಿರುವ ಮಾರುಕಟ್ಟೆಗೆ ವಿದ್ಯುತ್ ಸೌಲಭ್ಯವಿದ್ದರೂ ಸಹ ಇದನ್ನು ಬಿಬಿಎಂಪಿಗೆ ಹಸ್ತಾಂತರಿಸಿಲ್ಲ, ಹನುಮಂತನಗರ ಮಾರುಕಟ್ಟೆಯ ಕಡತವು ಸಿಕ್ಕಿಲ್ಲವೆಂದೂ, ಮೆಟ್ರೋ ಕಾಮಗಾರಿಗಾಗಿ ದೇವಯ್ಯ ಪಾರ್ಕ್‌ನಲ್ಲಿರುವ 35 ಅಂಗಡಿಗಳನ್ನು ಕೆಡವಿ ಹಾಕಲಾಗಿದ್ದು, ಇದರ ಹಣವನ್ನು ಇನ್ನೂ ಪಾಲಿಕೆಗೆ ಕೊಟ್ಟಿಲ್ಲವೆಂದೂ ತಿಳಿಸಿದರು. ಈ ಬಗ್ಗೆ ಪತ್ರ ವ್ಯವಹಾರ ನಡೆಸಿ ಕೂಡಲೇ ಕ್ರಮ ವಹಿಸುವಂತೆ ಸೂಚಿಸಲಾಯಿತು.

ಎಸ್.ಆರ್ ದರದಲ್ಲಿ ಬಾಡಿಗೆಯನ್ನು ಪರಿಷ್ಕರಿಸಿ, ಹಳೆಯ ದರವನ್ನು ಈಗಿನ ದರಕ್ಕೆ ತಕ್ಕಹಾಗೆ ನಿಗಧಿಪಡಿಸಿ ಪ್ರಸ್ತಾವನೆಯನ್ನು ಸಮಿತಿಗೆ ಮಂಡಿಸಲು ಸೂಚಿಸಲಾಯಿತು. ಪ್ರತಿಯೊಂದು ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡುತ್ತಿರುವವರಿಗೆ ನಿಗದಿಪಡಿಸಿರುವ ಹೊಸ ದರದಂತೆ ಬಾಡಿಗೆಯನ್ನು ಕಟ್ಟುವಂತೆ ನೋಟಿಸ್ ಕೊಟ್ಟು, ಇದಕ್ಕೆ ಒಪ್ಪದೇ ಇದ್ದ ಪಕ್ಷದಲ್ಲಿ ಅಂಗಡಿಯನ್ನು ತೆರವುಗೊಳಿಸುವುದಾಗಿ ಸೂಚಿಸಬೇಕು. ನಂತರ ಅಕ್ಷನ್ ಪ್ಲಾನ್ ಮಾಡಿ, ಮಳಿಗೆಗಳನ್ನು ಬೇರೆಯವರಿಗೆ ಕೊಡುವುದರಿಂದ ಪಾಲಿಕೆಗೆ ಆದಾಯ ಬಂದಂತಾಗುತ್ತದೆ ಎಂದು ಪಾಲಿಕೆಯ ಹಿರಿಯ ಅಧಿಕಾರಿಗಳು ಸೂಚಿಸಿದರು.

ಹೊಸ ವಲಯಗಳಿಗೆ ಸಂಬಂಧಪಟ್ಟಂತೆ ವಾಣಿಜ್ಯ ಮಳಿಗೆಗಳ ಬಗ್ಗೆ ಪರಿಶೀಲಿಸಲಾಯಿತು. ಇಲ್ಲಿಯೂ ಸಹ ಕೆಲವು ಮಳಿಗೆದಾರರು ಪರವಾನಗಿ ಶುಲ್ಕವನ್ನು ಬಾಕಿ ಉಳಿಸಿಕೊಂಡಿರುವುದನ್ನು ಸಮಿತಿಯು ಗಮನಿಸಿ, ಜರೂರಾಗಿ ಬಾಕಿ ಇರುವ ಮೊತ್ತವನ್ನು ವಸೂಲಿ ಮಾಡುವಂತೆ, ಪಾವತಿಸಲು ತಪ್ಪಿದಲ್ಲಿ ಕಾನೂನು ರೀತ್ಯಾ ಕ್ರಮ ಜರುಗಿಸಲು ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೂ ಸೂಚಿಸಲಾಯಿತು.

ಪಾಲಿಕೆಯ 121 ಮಾರುಕಟ್ಟೆಗಳಿಗೆ ಬಾಕಿ ಇರುವ ಪರವಾನಗಿ ಶುಲ್ಕವನ್ನು ಪಾವತಿಸುವಂತೆ ನೋಟಿಸ್‌ನ್ನು ಒಂದು ವಾರದೊಳಗೆ ಜಾರಿಮಾಡಲು ಸೂಚಿಸಲಾಯಿತು. ಗರುಡ ಮಹಲ್‌ನಿಂದ ಬರಬೇಕಾದ ಬಾಕಿಯನ್ನು ವಸೂಲಿ ಮಾಡುವಂತೆ ಹಾಗೂ ಮೂಲ ಹಂಚಿಕೆದಾರರರು ಮರಣ ಹೊಂದಿದ್ದ ಪಕ್ಷದಲ್ಲಿ ಬೇರೆಯವರು ವ್ಯಾಪಾರ ಮಾಡುತ್ತಿದ್ದರೆ ಇಂಥವರ ವಿರುದ್ಧ ಕಾನೂನು ರೀತ್ಯಾ ಮುಂದಿನ ಕ್ರಮ ವಹಿಸಲು ಸೂಚಿಸಲಾಯಿತು. ಮುಂದಿನ ಸಭೆಯೊಳಗೆ ಸೂಚಿಸಿರುವ ವಿಷಯಗಳ ಬಗ್ಗೆ ಕ್ರಮವಹಿಸಿ ಸಮಿತಿಗೆ ವರದಿ ಸಲ್ಲಿಸುವಂತೆ ಅಧ್ಯಕ್ಷರು ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/-

( ವೈ.ಆರ್. ಗೌರಮ್ಮ )
ಅಧ್ಯಕ್ಷರು
ಮಾರುಕಟ್ಟೆ ಸ್ಥಾಯಿ ಸಮಿತಿ

ಪ್ರತಿಯನ್ನು:

1) ಪೂಜ್ಯ ಮಹಾಪೌರರ ಅವಗಾಹನೆಗೆ ಕಳುಹಿಸಿದೆ.
2) ಮಾನ್ಯ ಉಪ ಮಹಾಪೌರರ ಅವಗಾಹನೆಗೆ ಕಳುಹಿಸಿದೆ.
3) ಮಾನ್ಯ ಆಯುಕ್ತರ ಅವಗಾಹನೆಗೆ ಕಳುಹಿಸಿದೆ.
4) ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ ಕಳುಹಿಸಲು ಕೋರಿದೆ.
5) ಅಪರ ಆಯುಕ್ತರು(ಹಣಕಾಸು-ಮಾರುಕಟ್ಟೆ)ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
6) ಅಪರ/ಜಂಟಿ ಆಯುಕ್ತರು(ಯಲಹಂಕ) (ಮಹದೇವಪುರ) (ಬೊಮ್ಮನಹಳ್ಳಿ) (ರಾಜರಾಜೇಶ್ವರಿನಗರ) (ದಾಸರಹಳ್ಳಿ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
7) ಮುಖ್ಯ ಅಭಿಯಂತರರು(ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
8) ಉಪ ಆಯುಕ್ತರು (ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
9) ಕಂದಾಯ ಅಧಿಕಾರಿ (ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
10) ಸಹ ಕಂದಾಯ ಅಧಿಕಾರಿ (ಪೂರ್ವ/ಪಶ್ಚಿಮ/ದಕ್ಷಿಣ) ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
11) ಮಾರುಕಟ್ಟೆ ಸ್ಥಾಯಿ ಸಮಿತಿಯ ಮಾನ್ಯ ಸದಸ್ಯರು, ಶ್ರೀಯುತರುಗಳಾದ :

| | |
|---|---|
| ಬಿ.ಆರ್. ನಂಜುಂಡಪ್ಪ (ವಾರ್ಡ್ ನಂ.17) | ಲತಾ.ಕೆ (ವಾರ್ಡ್‌ನಂ.174), |
| ಸಿದ್ದಲಿಂಗಯ್ಯ (ಸಿದ್ದು)(ವಾರ್ಡ್‌ನಂ.87) | ಎಸ್. ಕ್ರಿಯಾ ಶೈಲಜ (ವಾರ್ಡ್ ನಂ.48), |
| ಶ್ರೀಮತಿ. ವಿಜಯ.ಎ (ವಾರ್ಡ್‌ನಂ.197) | ಎನ್. ಪಿಳ್ಳಪ್ಪ (ವಾರ್ಡ್ ನಂ.82), |
| ಗೀತಾ ಶ್ರೀನಿವಾಸರೆಡ್ಡಿ(ವಾರ್ಡ್ ನಂ.112) | ಮುನಿಸಂಜೀವಯ್ಯ (ವಾರ್ಡ್‌ನಂ.170) |
| ಎಲ್. ಶ್ರೀನಿವಾಸ್ (ವಾರ್ಡ್‌ನಂ.182), | ಕ್ವೀನ್ ಎಲಿಜಬೆತ್(ವಾರ್ಡ್‌ನಂ.96 ) ರವರಿಗೆ ಕಳುಹಿಸಿದೆ. |